

ಡಾ.ವಿನೋದ ಛೆಬ್ಬಿ

ಸಂಗಾತಿ, ಸಂದರ್ಭ, ಸಂಬಂಧ ಎಲ್ಲ ಅನುಕೂಲವಾಗಿದ್ದರೂ ಕಾಮಕೂಟ ಬೇಕೇ ಬೇಡವೇ ಎಂದು ನಿರ್ಧರಿಸುವುದು ಮಾನವರು ಮಾತ್ರ.

# 297: ಹೊಸ ದಾರಿ - 37

ಮಾನವರ ಕಾಮಸಂಬಂಧದ ಬಗೆಗೆ ಮಾತಾಡುತ್ತ ಹಸಿಕಾಮ, ಪ್ರಣಯ, ನಂಟುತನ ಎನ್ನುವ ಪ್ರವೃತ್ತಿಗಳ ಬಗೆಗೆ ಶುರುಮಾಡಿ, ಇವುಗಳ ಮೇಲೆ ಹಾರ್ಮೋನುಗಳು ಹೇಗೆ ಆಡಳಿತ ನಡೆಸುತ್ತವೆ ಎಂದು ಅರ್ಥಮಾಡಿಕೊಂಡೆವು. ಹಾರ್ಮೋನುಗಳ ಪ್ರಭಾವವು ಪರಸ್ಪರ ವಿರುದ್ಧವಾಗಿರುವಾಗ ಹಳೆಯ ಸಂಗಾತಿಯೊಡನೆ ಸಂಸಾರ ಮಾಡುತ್ತಲೇ ಕಾಮಾಪೇಕ್ಷೆಯನ್ನು ಉಳಿಸಿಕೊಳ್ಳಲು ಸಾಧ್ಯವಿದೆಯೆ ಎನ್ನುವ ಪ್ರಶ್ನೆಗೆ ಬಂದು ನಿಂತಿದ್ದೇವೆ. ಇದಕ್ಕೆ ಮಾಯಾ– ಮನೋಜ್ ದಂಪತಿಯನ್ನು ಉದಾಹರಿಸಬೇಕೆಂದರೆ ಅವರಿನ್ನೂ ತಮ್ಮ ಅನ್ಯೋನ್ಯತೆಯ ಸಮಾಧಿ ಸ್ಥಿತಿಯಿಂದ ಇನ್ನೂ ಹೊರಬಂದಿಲ್ಲ. ಅವರಷ್ಟಕ್ಕೆ ಅವರನ್ನು ಬಿಟ್ಟು ಹೊಸ ಜೋಡಿಯೊಂದನ್ನು ಪರಿಚಯಿಸುತ್ತಿದ್ದೇನೆ.

ಅಭಿ ಹಾಗೂ ಅಭಯ್ ಭಾರತದ ಬೇರೆ ಬೇರೆ ಭಾಗಗಳಿಂದ ಬಂದವರು. ಅವರ ಭಾಷೆ, ಸಂಸ್ಕೃತಿ ಭಿನ್ನವಾಗಿವೆ. ವಿದೇಶದ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಹಾಗೂ ಕೆಲಸ ಮಾಡುತ್ತಿರುವಾಗ ಭೇಟಿಯಾಗಿದ್ದು, ಹೊರದೇಶದಲ್ಲಿ ಪರಿಚಯವಾದ ಸ್ವದೇಶೀಯರು ಆಗುವಂತೆ ಹತ್ತಿರವಾಗಿದ್ದಾರೆ. ಸ್ನೇಹ ಬೆಳೆದು ಅನುಕೂಲತೆಗೆಂದು ಕೆಲವು ವರ್ಷಗಳಿಂದ ಒಟ್ಟಿಗೆ ವಾಸವಾಗಿದ್ದಾರೆ. ಮದುವೆಯಾಗಿದ್ದಾರೋ ಅಥವಾ ಮುಂದೆ ಮದುವೆಯಾಗುವರೋ ಎನ್ನುವುದು ಮುಖ್ಯವಲ್ಲ; ಯಾಕೆಂದರೆ ಅಧ್ಯಯನದ ಪರಿಸರದಲ್ಲಿ ಪರಿಕರಗಳೊಂದಿಗೆ ಗಂಟೆಗಟ್ಟಲೆ ಒಂದಾಗುತ್ತ ತಾನೂ ಒಂದು ಪರಿಕರವಾಗಿಬಿಡುವ ಪ್ರಸಂಗದಲ್ಲಿ ಮಾನವತೆಯನ್ನು ಜೀವಂತ ಇರಿಸಿಕೊಳ್ಳಬೇಕಾದರೆ ಇಂಥ ಒಡನಾಟಗಳು ಮಹತ್ವದ್ದಾಗುತ್ತವೆ. ಹಾಗಾಗಿ ಮೊದಲು ಮಾನವರಾಗಿ, ನಂತರ ಸ್ನೇಹಿತರಾಗಿ, ಆನಂತರ ಸಹವಾಸಿಗಳಾಗಿ, ಕ್ರಮೇಣ ಪ್ರಣಯ–ಕಾಮ ಜಾಗೃತವಾಗಿ ಹತ್ತಿರವಾಗಿದ್ದಾರೆ. ಅಂದರೆ, ಆಕರ್ಷಣೆಯಲ್ಲಿ ಶುರುವಾಗಿ, ಪ್ರಣಯ–ಕಾಮದಲ್ಲಿ ಮುಂದುವರಿದು, ಪರಸ್ಪರ ಬಿಟ್ಟಿರಲಿಕ್ಕಾಗದೆ ಸಂಸಾರ ಹೂಡುವಂಥ ಸಾಮಾನ್ಯ ಸಂಬಂಧಗಳ ವಿರುದ್ಧ ದಿಕ್ಕಿನಲ್ಲಿ ಇವರು ಸಾಗುತ್ತಿದ್ದಾರೆ. ಇವರಿಬ್ಬರ ನಡುವಿನ ಸೆಳೆತವೇನು, ಹಾಗೂ ಅದು ಕಾಮಸಂಬಂಧಕ್ಕೆ ಹೇಗೆ ಹಾದಿ ಮಾಡಿಕೊಟ್ಟಿದೆ ಎಂದು ನೋಡೋಣ.

ಇವರಿಬ್ಬರ ಬಗೆಗೆ ಸ್ವಲ್ಪ ಮಾಹಿತಿ: ಇವರ ಮಾತೃಭಾಷೆಗಳು ಬೇರೆಯಾಗಿದ್ದು, ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ವ್ಯವಹರಿಸುತ್ತಾರೆ. ಯಾವುದೇ ಸಂಪ್ರದಾಯಕ್ಕೆ ಸೇರಿದವರಲ್ಲ, ಅಂಥದ್ದನ್ನು ನಂಬುವವರೂ ಅಲ್ಲವೆಂದು ಅವರ ನಡವಳಿಕೆ ಹೇಳುತ್ತದೆ. ಇಬ್ಬರೂ ಸ್ವತಂತ್ರ ಸ್ವಭಾವದವರು. ಇನ್ನು, ಅಭಿಗೆ ಬಂದರೆ ಅವಳೊಂದು ರಹಸ್ಯಮಯ ವ್ಯಕ್ತಿಯಂತೆ ಇದ್ದಾಳೆ. ಉದಾಹರಣೆಗೆ, ಅವಳ ಪೂರ್ತಿ ಹೆಸರು ಅಭಯನಿಗೆ ಗೊತ್ತಿಲ್ಲ. ಅಭಿಲಾಷಾ ಎಂದೋ, ಅಬಿಗೇಲ್ ಎಂದೋ ತಿಳಿಯದೆ, ಅಭಿಯ ಮುಂದೆ ಏನಿದೆ ಎಂದು ಕೇಳಿದರೆ 'ಅಭೀ ಹೈ...' ಎನ್ನುತ್ತ ದ್ವಂದ್ವಾರ್ಥದ ನಸುನಗುತ್ತಾಳೆ. ಇತ್ತ ಅಜಯ ಅಸ್ತವ್ಯಸ್ತವಾಗಿ ಗಡ್ಡಮೀಸೆ ಬೆಳೆಸಿದ್ದು ಹೊರನೋಟಕ್ಕೆ ಪುಂಡನೆಂದು ಕಾಣುತ್ತಾನೆ. ಹಾಗೂ ಒಬ್ಬನೇ ಸುಖವಾಗಿರುತ್ತಾನೆ.

ಇನ್ನು ಇವರ ಸಂಬಂಧದ ಕಡೆ ಕಣ್ಣು ಹಾಯಿಸೋಣ. ಇವರು ಅನುಕೂಲಕ್ಕೋಸ್ಕರ ಸಹವಾಸಿಗಳಾಗಿದ್ದಾರಷ್ಟೆ? ಇಬ್ಬರೂ ಸೇರಿ ಮನೆಗೆಲಸ, ಅಡುಗೆಲಸ ಮಾಡಿದರೂ ಸಾಕಷ್ಟು ಸಲ ಊಟವನ್ನು ಒಬ್ಬೊಬ್ಬರೇ ಮಾಡಿದ್ದಾರೆ. ಹಾಸಿಗೆಗೂ ಒಟ್ಟಿಗೆ ಹೋಗುವುದಿಲ್ಲ. ಒಬ್ಬರಿಗೋಸ್ಕರ ಇನ್ನೊಬ್ಬರು ಕಾಯದಿರುವುದನ್ನು ನೋಡಿದರೆ ಸಂಬಂಧ ಕಟ್ಟಿಕೊಂಡಂತೆ ಕಾಣುತ್ತಿಲ್ಲ. ಇವರ ಶಾರೀರಿಕ ಸಂಬಂಧವಂತೂ ಬಹಳ ವಿಚಿತ್ರವಾಗಿದೆ. ಆರಾಮವಾಗಿ ಟೀವಿ ವೀಕ್ಷಿಸುವಾಗ ಹೆಚ್ಚೆನಂಶ ಕೈಹಿಡಿದುಕೊಂಡೋ ಅರೆತಬ್ಬಿ ಕುಳಿತುಕೊಂಡೋ ಇರುತ್ತಾರೆ. ಆಗ ಅಜಯನಲ್ಲಿ ಟೆಸ್ಟೋಸ್ಟೆರೋನ್ ಉಕ್ಕುತ್ತಿದ್ದರೂ ಹಸಿಕಾಮದ ವಾಂಛಲ್ಯ ಪ್ರಕಟವಾಗುವುದಿಲ್ಲ. ಅಭಿ ಅವನ ತೋಳುಗಳಲ್ಲಿ ಮಲಗಿ ಡೋಪಮಿನ್ ಹರಿಸುತ್ತಿದ್ದರೂ ಅವಳ ಸ್ಪರ್ಶದಲ್ಲಿ ಪ್ರಣಯೇಚ್ಛೆ ಇರುವುದಿಲ್ಲ. ಕೆಲವೊಮ್ಮೆ ಇಬ್ಬರಿಗೂ ಏಕಕಾಲಕ್ಕೆ ಕಾಮ ಕೆರಳಿದ್ದಿದೆ. ಆದರೆ ಅದು ಜನನಾಂಗಗಳ ತನಕ, ಕೂಟದ ತನಕ ಬಹುತೇಕ ಹೋಗುವುದಿಲ್ಲ. ಹಾಗಾಗಿ, ಅವರಲ್ಲಿ ಕಾಮಕೂಟ ಕೆಲವೊಮ್ಮೆ ನಡೆದಿದ್ದರೂ ಅದರಲ್ಲಿ ಖಚಿತತೆ, ನಿಯಮಿತತೆ, ಅಥವಾ ಇನ್ನೊಂದು ಸಲ ನಡೆಯುವ ಮುನ್ಸೂಚನೆ ಕಾಣುತ್ತಿಲ್ಲ. ಹಾಗೆಯೇ, ಅವರಾಡುವ ಸರಸವೂ ಕೂಟದ ಉದ್ದೇಶದಿಂದ ಮುಕ್ತವಾಗಿರುವುದರಿಂದ ಮುನ್ನಲಿವು ಎನಿಸಿಕೊಳ್ಳುವುದಿಲ್ಲ.

ಇಲ್ಲೊಂದು ಕುತೂಹಲದ ವಿಷಯ: ಇವರು ಯಾವುದೋ ದೇಶದಲ್ಲಿದ್ದಾರೆ. ಇಬ್ಬರೇ ವಾಸವಾಗಿದ್ದಾರೆ. ಏರುವಯಸ್ಸು. ಏಕಾಂತತೆ ಬೇಕೋ ಎನ್ನುವಷ್ಟಿದೆ. ಕಾಮ–ಪ್ರೇಮ ಹಂಚಿಕೊಳ್ಳುವುದಕ್ಕೆ, ಅದರಲ್ಲಿ ತೊಯ್ದು ತೊಪ್ಪೆಯಾಗುವುದಕ್ಕೆ ಯಾವುದೇ ಅಡ್ಡಿಯಿಲ್ಲ. ಯಾರಿಗಾದರೂ ಇಷ್ಟಿದ್ದರೆ ಸಾಕು, ಕಾಮಕೂಟದಲ್ಲಿ 'ಕೊನೆಯ ಉಸಿರಿನ ತನಕ' ತೊಡಗಬಹುದಿತ್ತು. ಆದರೆ ಅಂಥದ್ದು ಯಾವುದೂ ನಡೆಯುತ್ತಿಲ್ಲ. ಇಲ್ಲಿ ಗಂಡುತನ ಹಾಗೂ ಹೆಣ್ಣುತನ ಎನ್ನುವುದೂ ಲೆಕ್ಕಕ್ಕೆ ಬರದೆ ಹೋಗಿದೆ. ಅಂದರೆ, ಹಸಿಕಾಮ, ಪ್ರಣಯ, ನಂಟುತನದಂಥ ಮೂಲ ಪ್ರವೃತ್ತಿಗಳನ್ನು ಹತ್ತಿಕ್ಕಿ ಮೆರೆಯುವ ಇನ್ನೊಂದು ಪ್ರವೃತ್ತಿ ಮೆರೆಯುತ್ತಿದೆಯೆಂದು ಸ್ಪಷ್ಟವಾಗುತ್ತದೆ. ಇದು ವೈರಾಗ್ಯ, ಸಂಯಮ ಅಥವಾ ಬ್ರಹ್ಮಚರ್ಯವಂತೂ ಅಲ್ಲ.

ಹೀಗೆ ಅನೇಕ ದಂಪತಿಗಳಲ್ಲಿ ಕಾಮ–ಪ್ರಣಯ–ಪ್ರೀತಿಗೆ ಸಾಕಷ್ಟು ಅವಕಾಶಗಳಿದ್ದರೂ ಯಾವುದೋ ಕಾರಣದಿಂದ ಪರಸ್ಪರ ತೆರೆದುಕೊಳ್ಳದೆ ತಮ್ಮಷ್ಟಕ್ಕೆ ತಾವಿರುತ್ತಾರೆ. ಈ ಕಾರಣವನ್ನು ಸ್ವಂತಿಕೆ ಅಥವಾ ತನ್ನತನ (selfhood) ಎಂದು ಹೆಸರಿಸೋಣ. ಸ್ವಂತಿಕೆ/ತನ್ನತನ ಎಂದರೇನು? ನಿಮ್ಮ ಬಗೆಗೆ ನೀವು ಏನು ಅಂದುಕೊಳ್ಳುತ್ತೀರಿ, ನಿಮ್ಮನ್ನು ನೀವು ಹೇಗೆ ಕಾಣುತ್ತೀರಿ, ಸಂಗಾತಿಯು ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ, ಹಾಗೂ ಅವರು ನಡೆಸಿಕೊಳ್ಳುವುದನ್ನು ನೀವು ಹೇಗೆ ತೆಗೆದುಕೊಳ್ಳುತ್ತೀರಿ– ಇದರ ಬಗೆಗಿನ ನಿಮ್ಮ ಪರಿಕಲ್ಪನೆಗಳ ಒಟ್ಟು ಫಲಶ್ರುತಿ. ಈ ಪರಿಕಲ್ಪನೆಗಳು ನಿಮ್ಮೊಳಗೆ ಮಥಿಸುತ್ತ ಸಂಗಾತಿಯನ್ನು ಬಯಸುವುದೋ ಬೇಡವೋ ಎಂದು ನಿರ್ಧರಿಸುವುದಕ್ಕೆ ಕಾರಣವಾಗುತ್ತವೆ. ನಿಮ್ಮ ಸ್ವಂತಿಕೆಯ ಬಗೆಗಿನ ಸಂಘರ್ಷ (ನನ್ನೊಳಗೆ ಏನು ನಡೆಯುತ್ತಿದೆ?) ಹಾಗೂ ಸಂಗಾತಿಯನ್ನು ಬಯಸುವುದರ ಬಗೆಗಿನ ಸಂಘರ್ಷ (ನಾನು ಸಂಗಾತಿಗೆ ಹೇಗೆ ಸ್ಪಂದಿಸಬೇಕು?) — ಇವೆರಡೂ ಜೊತೆಜೊತೆಯಾಗಿ ಸಾಗುತ್ತವೆ. ಆಗ ಪ್ರೇರಣೆಯು ಸ್ವಂತಿಕೆಯ ಮೂಲದಿಂದ ಬಂದರೆ — ಅಂತಃಪ್ರೇರಣೆ ಎಂದರೆ ಇದೇ — ಕಾಮದ ಸಂವೇದನೆಗಳಿಗೆ ಅಸ್ಪದ ಕೊಡುತ್ತೀರಿ, ಕೂಟ ಬಯಸುತ್ತೀರಿ.

ಪ್ರೇಮ–ಕಾಮ, ಸಂತಾನೋತ್ಪತ್ತಿ, ಹಾಗೂ ಏಕಸಂಗಾತಿಯೊಡನೆ ಬದುಕು — ಇವು ಮಾನವರಲ್ಲಷ್ಟೇ ಅಲ್ಲ, ಗಿಬ್ಬನ್ ಮಂಗ, ತೋಳ, ರಾಜಹಂಸ, ಹದ್ದು ಮುಂತಾದ ಪ್ರಾಣಿಗಳಲ್ಲೂ ಕಾಣುತ್ತವೆ. ಆದರೆ ಸ್ವಂತಿಕೆ ಹಾಗೂ ಸಾಂಗತ್ಯದ ಬಲದಿಂದ ಬದ್ಧಸಂಗಾತಿಯೊಡನೆ ಕೂಟ ಬೇಕೇ ಬೇಡವೇ ಎಂದು ಆಯ್ಕೆಮಾಡುವ ಬುದ್ಧಿವಂತಿಕೆಯನ್ನು ಮಾನವರಲ್ಲಿ ಮಾತ್ರ ಕಾಣಬಹುದು.

ಪ್ರಯೋಗ 32: ಈಮುಂಚೆ ಸಂಗಾತಿಯೊಡನೆ ಮಲಗಿರುವಾಗ ಮನದಲ್ಲಿ ಕಾಮಾಸಕ್ತಿ ಮೂಡಿದ್ದರೂ ಕೂಟಕ್ಕೆ ಮುಂದುವರಿಯದೆ ಇರುವ ಸಂದರ್ಭವನ್ನು ನೆನಪಿಸಿಕೊಳ್ಳಿ. ಆಗ ನಿಮ್ಮೊಳಗಿನ ಯಾವ ಕಾರಣವು ಕೂಟ ಬೇಡವೆನ್ನಲು ಪ್ರೇರೇಪಿಸಿತು? ಅದರಲ್ಲಿ ನಿಮ್ಮ ಕಾರಣಗಳನ್ನು ಸಂಗಾತಿಯ ಬಗೆಗಿನ ಕಾರಣಗಳಿಂದ ಬೇರ್ಪಡಿಸಿ. ನಿಮ್ಮ ಬಗೆಗೆ ನೀವು ಹೀಗೆ ನಿರ್ಧರಿಸುವುದರ ಹಿನ್ನೆಲೆಯೇನು ಎಂದು ವಿಮರ್ಶಿಸುತ್ತ ಸಂಗಾತಿಯೊಡನೆ ಹಂಚಿಕೊಳ್ಳಿ.

ವಾರದ ಪ್ರಶ್ನೆಗಳು: ಬದ್ಧ ಸಂಗಾತಿಯೊಡನೆ ಇವೊತ್ತು ಶಾರೀರಿಕ ಬಯಕೆಯನ್ನು ಈಡೇರಿಸಿಕೊಳ್ಳಬೇಕು ಎಂದೆನಿಸಿದಾಗ ಕಾಮ ಪ್ರಣಯ ಪ್ರೀತಿ ಇವುಗಳನ್ನು ಬಿಟ್ಟು ಇನ್ನೇನು ವಿಚಾರಗಳು ಬರುತ್ತವೆ? ಇವುಗಳು ಎಷ್ಟರ ಮಟ್ಟಿಗೆ ಕೂಟಕ್ಕೆ ಪ್ರಚೋದನೆ ಕೊಡುತ್ತವೆ ಅಥವಾ ಅಡ್ಡಿಯಾಗುತ್ತವೆ ಎಂದು ಗಮನಿಸಿ. ತಲೆಯಲ್ಲಿ ತಾಕಲಾಟ ನಡೆದರೆ ಸಂಗಾತಿಯ ಜೊತೆಗೆ, ಮನಸ್ಸಾದರೆ ನನ್ನೊಡನೆ ಹಂಚಿಕೊಳ್ಳಿ.

ಸಂಪರ್ಕಕ್ಕೆ: 8494933888; Email: vinod.chebbi@gmail.com